# 8

# ಪ್ರತಿಯೊಬ್ಬನಿಗೆ ಆಗಾಗ ಕೆಟ್ಟದಿನವಿರುವುದು

## (ಲೂಕ 10:38-42)

ಪ್ರತಿಯೊಬ್ಬನಿಗೆ ಆಗಾಗ ಕೆಟ್ಟದಿನವಿರುವುದು. ಬಹಳ ಕೆಟ್ಟ ದಿನವಿದ್ದ ಒಬ್ಬ ಕಟ್ಟಡ ಕಟ್ಟುವ ಕೆಲಸದವನ ಬಗ್ಗೆ ಕೆಲವು ದಿನಗಳ ಹಿಂದೆ ಓದಿದ್ದೆನು. ಕಂಪನಿಯ ಅಪಘಾತದ ಅರ್ಜಿಯಲ್ಲಿ ಕೊಟ್ಟ ಅವನ ವರದಿ ಇದು:

> ನಾನು ಕಟ್ಟಡದ ಸಮೀಪಕ್ಕೆ ಹೋದಾಗ ಬಿರುಗಾಳಿಯು ಮೇಲೆ ಸುತ್ತಲಿನ ಇಟ್ಟಿಗೆಗಳನ್ನು ಹಾರಿಸಿಬಿಟ್ಟಿತ್ತು. ಕಟ್ಟಡದ ಒಂದು ದಿಮ್ಮಿಗೆ ಚಕ್ರದ ರಾಟಿಯ ಹಗ್ಗದ ಮೂಲಕ ಕೆಲವು ಕೊಳವೆ ಇಟ್ಟಿಗೆಗಳನ್ನು ಕಟ್ಟಡದ ಮೇಲಕ್ಕೇರಿಸಿದನು. ಹಾಳಾದ ಭಾಗವನ್ನು ರಿಪೇರಿ ಮಾಡಿದನಂತರ ಬಹಳ ಇಟ್ಟಿಗೆಗಳು ಉಳಿದವು. ನಾನು ಕೆಳಗೆ ಹೋಗಿ ಹಗ್ಗವನ್ನು ಸಡಿಲಗೊಳಿಸಿದೆನು. ದುರ್ದೈವದಿಂದ ಇಟ್ಟಿಗೆಗಳಿದ್ದ ಕೊಳವೆ ನನಗಿಂತ ಹೆಚ್ಚು ಭಾರವಾದದ್ದರಿಂದ, ನಾನು ಏನಾಗುತ್ತಿದೆ ಎಂದು ತಿಳಿಯುವ ಮೊದಲೇ ಕೊಳವೆ ಕೆಳಗಿಳಿಯುತ್ತ ನಾನು ಮೇಲಕ್ಕೆ ಹೋಗಲು ಪ್ರಾರಂಭಿಸಿದೆನು.
>
> ಕೆಳಗೆ ಜಿಗಿಯದಷ್ಟು ಮೇಲೆ ಹೋದದ್ದರಿಂದ ಹಾಗೆಯೇ ನೋಡಿಕೊಂಡು ಹೋಗಲು ನಿರ್ಣಯಿಸಿದೆನು. ಅರ್ಧ ದಾರಿಯಲ್ಲಿ ಇಟ್ಟಿಗೆಗಳಿದ್ದ ಕೊಳವೆ ವೇಗದಿಂದ ಬಂದು ನನ್ನ ಭುಜಕ್ಕೆ ಬಲವಾಗಿ ಬಡಿದು ಕೆಳಗಿಳಿಯಿತು. ನಾನು ಮೇಲೆ ಹೋಗಿ ದಿಮ್ಮಿಗೆ ತಲೆ ಬಡಿದು, ರಾಟಿಗೆ ಸಿಕ್ಕಿ ಕೈಬೆರೆಳುಗಳಿಗೆ ಗಾಯ ವಾಯಿತು. ಕೊಳವೆ ನೆಲಕ್ಕೆ ಬಲವಾಗಿ ಅಪ್ಪಳಿಸಿ, ತಳವು ಒಡೆದು ಇಟ್ಟಿಗೆಗಳು ಚೆಲ್ಲಾಪಿಲ್ಲಿಯಾಗಿ ಬಿದ್ದವು.
>
> ನಾನು ಈಗ ಕೊಳವೆಗಿಂಥ ಹೆಚ್ಚು ಭಾರವುಳ್ಳವನಾಗಿದ್ದರಿಂದ ವೇಗವಾಗಿ ಕೆಳಗಿಳಿಯಲು ಪ್ರಾರಂಭಿಸಿದೆನು. ಕೊಳವೆ ವೇಗದಿಂದ ಮೇಲೆ ಬರುತ್ತ ಮಧ್ಯದಲ್ಲಿ ಮೊಣಕಾಲಿಗೆ ಬಡಿದು ಗಾಯಗಳಾದವು. ನಾನು ನೆಲಕ್ಕೆ ಅಪ್ಪಳಿಸಿದಾಗ ಚೆಲ್ಲಲ್ಪಟ್ಟ ಇಟ್ಟಿಗೆಗಳ ಮೇಲೆ ಬಿದ್ದು ಹಲವಾರು ಗಾಯಗಳಾದವು. ಹಗ್ಗದ ಪಟ್ಟು ಹಿಡಿತವನ್ನು ಕೈಬಿಟ್ಟೆನು, ಖಾಲಿ ಕೊಳವೆ ಕೆಳಗೆ ಬಂದು ನನ್ನತಲೆಗೆ ಬಲವಾದ ಪೆಟ್ಟುಕೊಟ್ಟಿತು. ನಾನು ಅಸ್ಪತ್ರೆಯಲ್ಲಿ ಹಾಕಲ್ಪಟ್ಟೆನು.
>
> ದಯವಿಟ್ಟು ಅಸ್ವಸ್ಥತೆಯ ಕಾರಣ ರಜೆಕೊಡ ಬೇಕೆಂದು ಕೇಳಿಕೊಳ್ಳುತ್ತೇನೆ.

ಈ ಕೆಲಸದವನೊಂದಿಗೆ ನನ್ನನ್ನು ಗುರುತಿಸಿಕೊಳ್ಳಬಲ್ಲೆನು. ಇದು ಯಾವುದೇ ಭಿನ್ನತೆ ಮಾಡುವದಿಲ್ಲ; ಆಗಾಗ ನಮಗೆ ಕೆಟ್ಟದಿನಗಳು ಇರುವವು.

ನಾವು ಸತ್ಯವೇದದಲ್ಲಿ ನೋಡುವಾಗ ಅನೇಕ ವ್ಯಕ್ತಿಗಳ ಭಾವಚಿತ್ರಗಳನ್ನು ನೋಡುವೆವು. ಅವರ ಜೀವನದ ಕ್ಷಣಗಳು ಪ್ರೇರೆಪಿತ ಬರಹಗಾರರಿಂದ ಸಮಯದಲ್ಲಿ

ಸೆರೆ ಹಿಡಿಯಲ್ಪಟ್ಟಿರುವವು. ಯಾವಾಗಲೂ ಜನರು ಅಪೇಕ್ಷಿಸಿದ ಕ್ಷಣಗಳನ್ನು ಹಿಡಿದಿಡಲಿಲ್ಲ. ಅದು ಹೇಗೆ ಸಂಭವಿಸುತ್ತದೆಂಬುದನ್ನು ನಾವು ತಿಳಿಯಬಹುದು. ನಮ್ಮ ಡ್ರೈವಿಂಗ ಲೈಸೆನ್ಸಿನ ಮೇಲೆ ಇಲ್ಲವೇ ಪಾಸ್‌ಪೋರ್ಟಿನಲ್ಲಿ ಒಂದೆರಡು ಕೆಟ್ಟ ಭಾವಚಿತ್ರಗಳು ನಮ್ಮೆಲ್ಲರಲ್ಲಿ ಇರುತ್ತವೆ.[1]

ಲೂಕ 10ರಿಂದ ತೆಗೆದುಕೊಳ್ಳುವ ಈ ಪಾಠದಲ್ಲಿ ಮಾರ್ಥಳ ಚಿತ್ರವನ್ನು - ಆಕೆಗೆ ಇದ್ದ ಕೆಟ್ಟ ದಿನವನ್ನು ಅಧ್ಯಯನ ಮಾಡುವೆವು.

ಮರಿಯಳ ಹಾಗೂ ಲಾಜರನ ಸಹೋದರಿಯಾದ ಮಾರ್ಥಳ ಬಗ್ಗೆ ನೀವು ವಿಚಾರಿಸುವಾಗ ನಿಮ್ಮ ಮನಸ್ಸಿಗೆ ಏನು ಬರುವದು? “ಹೌದು, ಕರ್ತನೇ, ಲೋಕಕ್ಕೆ ಬರ ಬೇಕಾದ ದೇವಕುಮಾರನಾದ ಕ್ರಿಸ್ತನು ನೀನೇ ಎಂದು ನಂಬಿದ್ದೇನೆ” (ಯೋಹಾನ 11:27) ಎಂದು ಆಕೆ ಯೇಸುವಿಗೆ ಹೇಳಿದ ಸಮಯವನ್ನು ಯೋಚಿಸುವಿರೋ? ಇದು ಹೊಸ ಒಡಂಬಡಿಕೆಯ ಮಹಾ ಅರಿಕೆಗಳಲ್ಲಿ ಒಂದಾಗಿದೆ - ಮತ್ತಾಯ 16:16ರಲ್ಲಿ ಪೇತ್ರನು ಮಾಡಿದ ಅರಿಕೆಯಂತಿದೆ. ಯೋಹಾನ 12ರಲ್ಲಿ ಯೇಸುವಿನೊಂದಿಗೂ ತನ್ನ ಸಹೋದರಿ ಮತ್ತು ಸಹೋದರನೊಂದಿಗೂ ಅನ್ಯೋನ್ಯತೆಯನ್ನು ಅನುಭವಿಸುತ್ತಿರುವ ಆಕೆಯನ್ನು ಯೋಚಿಸುವಿರೋ? ಮಾರ್ಥಳ ಬಗ್ಗೆ ಯೋಚಿಸುವಾಗ ಆಕೆಯ ಜೀವನದ ಈ ದೊಡ್ಡ ಸಮಯಗಳನ್ನು ಯೋಚಿಸುವದಿಲ್ಲವೆಂದು ತಿಳಿಯುತ್ತೇನೆ. ಆದರೆ ಮಾರ್ಥಳ ಕೆಟ್ಟ ದಿನವಿದ್ದ, ಲೂಕ 10ರಲ್ಲಿ ದಾಖಲೆಯಾದ ಹೀನ ಸ್ಥಿತಿಯನ್ನು ಯೋಚಿಸುವಿರೆಂದು ತಿಳಿಯುತ್ತೇನೆ.

## ಮಾರ್ಥಳಿಗೆ ಕೆಟ್ಟ ದಿನವಿದ್ದಾಗ

### ಮಹತ್ವದ್ದಾಗಿ ಪ್ರಾರಂಭವಾದ ದಿನ (38, 39 ವಚನಗಳು)

ದಿನವು ಮಹತ್ವದ್ದಾಗಿ ಪ್ರಾರಂಭವಾಯಿತು. “ಅವರು ಸಂಚಾರ ಮಾಡುತ್ತಿರು ವಾಗ” (ವ. 3ಎ) ಎಂಬುದರೊಂದಿಗೆ ನಮ್ಮ ಪ್ರಸಂಗ ವಾಕ್ಯ ಪ್ರಾರಂಭವಾಗುತ್ತದೆ. “ಅವರು” ಎಂಬುದು ಯೇಸುವಿಗೂ ಆತನ ಹನ್ನೆರಡು ಜನ ಶಿಷ್ಯರಿಗೂ ಸಂಬಂಧಿಸಿದೆ. ಈ ಘಟನೆಯು ಪಲೆಸ್ತೀನದಲ್ಲಿ ಯೇಸುವಿನ ಮುಕ್ತಾಯದ ಸೇವೆಯಲ್ಲಿ, ಯೆರೂಸ ಲೇಮಿನ ಪ್ರಯಾಣಗಲೊಂದರಲ್ಲಿ ಸಂಭವಿಸಿತು. “ಆತನು ಒಂದಾನೊಂದು ಹಳ್ಳಿಗೆ ಬಂದನು” (ವ. 38ಬಿ). ಇದು ಬೇಥಾನ್ಯವಾಗಿತ್ತು (ಯೋಹಾನ 11). ಇದು ಎಣ್ಣೆ ಮರಗಳ ಬೆಟ್ಟದ ಪೂರ್ವದ ಇಳಕಲಿನಲ್ಲಿ ಯೆರೂಸಲೇಮಿನಿಂದ ಎರಡು ಮೈಲಿಗಿಂತ ಕಡಿಮೆ ದೂರದಲ್ಲಿತ್ತು. ಯೇಸು ಯೆರೂಸಲೇಮಿಗೆ ಪ್ರಯಾಣ ಮಾಡುತ್ತಿದ್ದಾಗಲೆಲ್ಲಾ ಅನೇಕ ಸಲ ಬೇಥಾನ್ಯದಲ್ಲಿ ಉಳಿದುಕೊಳ್ಳುತ್ತಿದ್ದನು.

“ಅಲ್ಲಿ ಮಾರ್ಥಳೆಂಬ ಒಬ್ಬ ಸ್ತ್ರೀಯು ಆತನನ್ನು ತನ್ನ ಮನೆಯಲ್ಲಿ ಇಳಿಸಿಕೊಂಡಳು” (ವ. 38ಸಿ). ಇಬ್ಬರು ಸಹೋದರಿಯರು, ಒಬ್ಬ ಸಹೋದರ ಇದ್ದ ಮನೆಯಲ್ಲಿ ಮಾರ್ಥಳು ಬಹುಶಃ ಹಿರಿಯಳಾಗಿದ್ದಳು. ಮನೆಯೂ ಆಕೆಯದೇ ಆಗಿರಬೇಕು. “ಮಾರ್ಥಳು ತನ್ನ ಮನೆಯನ್ನು ಆತನಿಗೆ ತೆರೆದಳು” ಎಂದು ಹೇಳುತ್ತದೆ. ಆಕೆ ಆತಿಥ್ಯಕ್ಕೆ ಮಾದರಿಯಾದಳು.

ಲೂಕನು ಕಥೆಯನ್ನು ಸರಳವಾಗಿ ಹೇಳಿದ್ದಾನೆ. ಉದಾಹರಣೆಗೆ ಅವನು ಅಲ್ಲಿರಬಹುದಾಗಿದ್ದ ಲಾಜರನ ಬಗ್ಗೆ ಬರೆದಿಲ್ಲ. ಯೇಸುವಿನೊಂದಿಗೆ ಪ್ರಯಾಣಮಾಡುತ್ತಿದ್ದ ಶಿಷ್ಯರ ಬಗೆಗೂ ವಿವರಣೆ ಕೊಟ್ಟಿಲ್ಲ. ಯೇಸುವು ಔತಣಕ್ಕಾಗಿ ಆಮಂತ್ರಿಸಲ್ಪಟ್ಟಾಗ ಅವರು ಎಲ್ಲಿ ಹೋದರು? ಈ ಕಥೆಯ ನಂತರದ ವಚನದಲ್ಲಿ ಪುನಃ ಶಿಷ್ಯರ ಬಗ್ಗೆ ಹೇಳ

ಲ್ಪಟ್ಟಿದೆ (ಲೂಕ 11:1). ಆದುದರಿಂದ ಅವರು ಬಹಳ ದೂರ ಹೋಗಿರಲಿಲ್ಲ. ಬಹುಶಃ ಅವರು ಮಾರ್ಥಳ ಮನೆಗೂ ಆಮಂತ್ರಿಸಲ್ಪಟ್ಟಿರಬೇಕು.[2] ಹದಿನಾರು ಜನರು[3] ಲೂಕ 10ರಲ್ಲಿ ಹೇಳಲ್ಪಟ್ಟ ಔತಣಕ್ಕೆ ಆಮಂತ್ರಿಸಲ್ಪಟ್ಟಿರಬೇಕು. ನೀವು ಮಹಿಳೆಯಾಗಿದ್ದರೆ, "ಮಾರ್ಥಳಿಗೆ ಅದು ಕೆಟ್ಟ ದಿನವಾಗಿದ್ದರಲ್ಲಿ ಸಂಶಯವಿಲ್ಲ" ಎಂದು ಯೋಚಿಸುತ್ತ ನಿಮ್ಮ ತಲೆ ಅಲ್ಲಾಡಿಸಬಹುದಿತ್ತು. ಹದಿನಾರು ಜನರಿಗೆ ಊಟ ಸಿದ್ಧಪಡಿಸುವುದು ಸುಲಭ ಕೆಲಸವಲ್ಲ.

ಯೇಸು ಸ್ನೇಹಿತರೊಂದಿಗೆ ಸಂದರ್ಶಿಸಿದ ಮನೆಯ ದೃಷ್ಯದೊಂದಿಗೆ ಕಥೆಯು ಹೀಗೆ ಪ್ರಾರಂಭವಾಗುತ್ತದೆ. "ನರಿಗಳಿಗೆ ಗುದ್ದುಗಳಿವೆ, ಆಕಾಶದಲ್ಲಿ ಹಾರಾಡುವ ಹಕ್ಕಿಗಳಿಗೆ ಗೂಡುಗಳಿವೆ; ಆದರೆ ಮನುಷ್ಯಕುಮಾರನಿಗೆ ತಲೆಯಿಡುವಷ್ಟು ಸ್ಥಳವೂ ಇಲ್ಲ" (ಮತ್ತಾಯ 8:20) ಎಂದು ಯೇಸು ಒಮ್ಮೆ ಹೇಳಿದ್ದನು. ಹೀಗಿದ್ದರೂ ಸುವಾರ್ತೆಯ ನಿಮಿತ್ತವಾಗಿ ತಮ್ಮ ಮನೆಗಳನ್ನು ಬಿಟ್ಟು ಬಿಡುವದಾದರೆ ಅವರಿಗೆ ನೂರು ಮನೆಗಳಿರುವವು ಎಂದೂ ಯೇಸು ಶಿಷ್ಯರಿಗೆ ಹೇಳಿದ್ದನು (ಮಾರ್ಕ 10:29, 30). ಯೇಸುವಿಗೆ ಸ್ವಂತ ಮನೆಯಿರದಿದ್ದರೂ ಪಾಲೆಸ್ತೀನದಲ್ಲೆಲ್ಲಾ ಅನೇಕ ಮನೆಗಳು - ಕಪೆರ್ನೌಮಿನಲ್ಲಿ ಪೇತ್ರನ ಅತ್ತೆಯ ಮನೆ ಹಾಗೂ ಬೇಥಾನ್ಯದಲ್ಲಿ ಮಾರ್ಥಳ ಮನೆ ಅಂಥ ಮನೆಗಳು ಇದ್ದವು.

"ಆಕೆಗೆ ಮರಿಯಳೆಂಬ ಒಬ್ಬ ತಂಗಿ ಇದ್ದಳು. ಈಕೆಯು ಸ್ವಾಮಿಯ ಪಾದಗಳ ಬಳಿಯಲ್ಲಿ ಕೂತುಕೊಂಡು ಆತನ ವಾಕ್ಯವನ್ನು ಕೇಳುತ್ತಿದ್ದಳು" (ವ. 39). ಗುರುವಿನ "ಪಾದಗಳ ಬಳಿಯಲ್ಲಿ ಕುಳಿತುಕೊಳ್ಳುವುದು" ಇಮ್ಮಡಿ ಮಹತ್ವದ್ದಾಗಿರುವುದು. ಮರಿಯಳು ಮಾಡಿದಂತೆ ಸಾಮಾನ್ಯವಾಗಿ ಶಿಷ್ಯರು ಗುರುವಿನ ಮಾತು ಕೇಳಲು ಅವನ ಪಾದಗಳ ಬಳಿ ಕುಳಿತುಕೊಳ್ಳುವರು. ಇದಕ್ಕೆ ಸಾಂಕೇತಿಕ ಅರ್ಥ ಇರಬಹುದು. ಒಬ್ಬನು ಗುರುವಿನ ಶಿಷ್ಯನಾಗಿದ್ದಾನೆ ಎಂಬುದಕ್ಕೆ ಸಂಕೇತವಾಗಿದೆ. "ಗಮಲಿ ಯೇಲನ ಪಾದ ಸನ್ನಿಧಿಯಲ್ಲಿ ... ." ಎಂದು ಪೌಲನು ಹೇಳಿದ್ದಾನೆ (ಅ.ಕೃ. 22:3).[4] ಪ್ರತಿಸಲ ನಮಗೆ ಮರಿಯಳ ಸತ್ಯವೇದ ಚಿತ್ರವಿರುವಾಗ, ಆಕೆ ಯೇಸುವಿನ ಪಾದಗಳ ಬಳಿಯಲ್ಲಿರುವಳು. ಲಾಜರನು ಸತ್ತಾಗ ಮರಿಯಳು ಅಳುತ್ತಾ ಯೇಸುವಿನ ಪಾದಗಳ ಬಳಿಬಿದ್ದಳು (ಯೋಹಾನ 11:32). ಯೇಸು ಅನಂತರ ಬೇಥಾನ್ಯದಲ್ಲಿ ಔತಣದಲ್ಲಿದ್ದರು. ಮರಿಯಳು ಮೊಣಕಾಲೂರಿ ಆತನ ಪಾದಗಳಿಗೆ ಅಭಿಷೇಕ ಮಾಡಿದಳು (ಯೋಹಾನ 12:3). ಸಾಮಾನ್ಯವಾಗಿ ರಬ್ಬಿಗಳು ತಮ್ಮ ಪಾದಗಳ ಬಳಿಯಲ್ಲಿ ಮಹಿಳೆಯರು ಕುಳಿತು ಕೊಳ್ಳುವದಕ್ಕೆ ಬಿಡುತ್ತಿರಲಿಲ್ಲ. ಕಲಿಯಲಿಕ್ಕೆ ಮಹಿಳೆಯರು ಸಮರ್ಥರಲ್ಲ ಎಂದು ಅನೇಕರು ತಿಳಿದಿದ್ದರು. ಯೇಸು ತನ್ನ ದಿನದ ಪೂರ್ವಕಲ್ಪಿತ ವಿಚಾರಗಳಲ್ಲಿ ಪಾಲುಗೊಳ್ಳಲಿಲ್ಲ. ಹೀಗೆ ಮರಿಯಳು ಯೇಸುವಿನ ಪಾದಗಳ ಬಳಿಯಲ್ಲಿ ಕುಳಿತು ಕೊಂಡು ಆತನ ವಾಕ್ಯಗಳಿಗೆ ಕಿವಿಗೊಟ್ಟಳು.

ಎಣ್ಣೆಮರಗಳ ಬೆಟ್ಟದ ಪೂರ್ವದ ಇಳುಕಲಿನಲ್ಲಿದ್ದ ಚಿಕ್ಕ ಮನೆಗೆ ಹಿಂದಿರುಗಿ ಬರೋಣ. ಯೇಸುವಿನ ಪಾದಗಳ ಬಳಿಯಲ್ಲಿ ಆತನ ಮಾತು ಕೇಳುತ್ತ ಕುಳಿತಿರುವಿರಿ. ಬೇಗನೇ ಊಟ ಮಾಡಲಿರುವ ಆಹಾರದ ರುಚಿಕರವಾದ, ಬಾಯಿಯಲ್ಲಿ ನೀರು ತರಿಸುವ ಸುವಾಸನೆಯಿಂದ ಕೋಣೆಯು ತುಂಬಿರುವುದು (ಪಟ್ಟಣದಲ್ಲಿ ಮಾರ್ಥಳು ಉತ್ತಮ ಅಡಿಗೆ ಮಾಡುವವಳೆಂದು ಪ್ರತಿಯೊಬ್ಬರಿಗೂ ತಿಳಿದಿತ್ತು). ಆತ್ಮಿಕ ಹಾಗೂ ದೈಹಿಕ ವಿಷಯಗಳಲ್ಲಿ ಅದು ಅಕರ್ಷಕ ದೃಶ್ಯವಾಗಿತ್ತು. ಅದು ಅದ್ಭುತಕರ ದಿನವಾಗಿತ್ತು.

ನಮ್ಮ ಮನೋಭಾವನೆಯು ಸರಿಯಾಗಿದ್ದರೆ, ಪ್ರತಿದಿನವೂ ವಿಶೇಷವಾದದ್ದಾಗಿರ ಬಹುದು. "ಈ ದಿನವು ಯೆಹೋವನಿಂದಲೇ ನೇಮಕವಾದದ್ದು; ಇದರಲ್ಲಿ ನಾವು ಉಲ್ಲಾಸದಿಂದ ಆನಂದಿಸೋಣ" (ಕೀರ್ತನೆ 118:24). ಮಾರ್ಥಳಂತೆ ನಾವೂ ಸಹ,

ಕರ್ತನನ್ನು ಆತನೊಂದಿಗೆ ಅನ್ಯೋನ್ಯತೆ ಅನುಭವಿಸಲು ನಮ್ಮ ಜೀವಿತಗಳಲ್ಲಿಯೂ ಮನೆಗಳಲ್ಲಿಯೂ ಆಮಂತ್ರಿಸಬಹುದು. "ಇಗೋ, ಬಾಗಿಲಲ್ಲಿ ನಿಂತುಕೊಂಡು ತಟ್ಟುತ್ತಾ ಇದ್ದೇನೆ; ಯಾವನಾದರೂ ನನ್ನ ಶಬ್ದವನ್ನು ಕೇಳಿ ಬಾಗಿಲನ್ನು ತೆರೆದರೆ ನಾನು ಒಳಗೆ ಬಂದು ಅವನ ಸಂಗಡ ಊಟ ಮಾಡವೆನು. ಅವನು ನನ್ನ ಸಂಗಡ ಊಟ ಮಾಡುವನು" (ಪ್ರಕಟನೆ 3:20) ಎಂದು ಆತನು ಹೇಳಿದ್ದಾನೆ. ಯಾವದೇ ದಿನ, ಈ ದಿನವೇ, ನಿನಗೆ ಹಾಗೂ ನನಗೆ ವಿಶೇಷ ದಿನವಾಗಿರಬಹುದು.

## ಕೆಟ್ಟದ್ದಾಗಿ ಬದಲಾದ ಒಂದು ದಿನ (ವ. 40)

ವ. 40ರಲ್ಲಿ ಮಾರ್ಥಳ ದಿನವೂ ಕೆಟ್ಟದ್ದಾಗಿ ಬದಲಾಯಿತು. KJVಯಲ್ಲಿ ಈ ಪರಿಚಿತ ಮಾತುಗಳಿವೆ: "ಮಾರ್ಥಳು ಬಹಳ ಸೇವೆಯ ವಿಷಯವಾಗಿ ಬೇಸತ್ತಳು" (ವ. 40ಎ). "ಆದರೆ ಮಾರ್ಥಳು ತನ್ನ ಎಲ್ಲಾ ಸಿದ್ಧತೆಗಳೊಂದಿಗೆ ಕೋಪಗೊಂಡಳು"[5] ಎಂದು NASB ಹೇಳುತ್ತದೆ. "ಬೇಸತ್ತು" ಇಲ್ಲವೇ "ಕೋಪಗೊಳ್ಳು" ಎಂದು ಭಾಷಾಂತರಸಲ್ಪಟ್ಟ ಗ್ರೀಕ ಕ್ರಿಯಾಪದದ ಅರ್ಥ, "ತನ್ನ ಗಮನವನ್ನು ಹರಿದಾಡಲು ಬಿಟ್ಟಳು" ಎಂಬುದು.

ಮಾರ್ಥಳ ಮನೆಗೆ ಒಂದೇ ಒಂದು ಕೋಣೆಯಿದ್ದಿರ ಬೇಕು (ಆ ದಿನಗಳಲ್ಲಿ ಅನೇಕ ಮನೆಗಳಿಗೆ ಒಂದೇ ಒಂದು ಕೋಣೆ ಇದ್ದವು). ಮಾರ್ಥಳು ಒಂದು ಮೂಲೆಯಲ್ಲಿ ಅಡಿಗೆ ಮಾಡುತ್ತಿದ್ದಾಗ ಇನ್ನೊಂದು ಮೂಲೆಯಲ್ಲಿ ಯೇಸು ಮರಿಯಳೊಂದಿಗೆ ಮಾತಾಡುತ್ತಿದ್ದನು. ಒಂದು ವೇಳೆ ಆ ಮನೆಯಲ್ಲಿ ಒಂದಕ್ಕಿಂತ ಹೆಚ್ಚು ಕೊಣೆಗಳಿದ್ದರೆ. ಮಾರ್ಥಳು ಇದ್ದ ಮತ್ತು ಯೇಸುವು ಇದ್ದ ಕೋಣೆಗಳು ಬೇರೆಯಾಗಿ ದೂರದಲ್ಲಿರಲಿಕ್ಕಿಲ್ಲ.[6] ಮಾರ್ಥಳು ಊಟಕ್ಕೆ ಸಿದ್ಧತೆ ಮಾಡುತ್ತಿದ್ದಾಗ, ಯೇಸುವಿನ ಮಾತು ಕೇಳಬಹುದಿತ್ತು. "ಆದರೆ ಮಾರ್ಥಳು ಬೇಸತ್ತು ಕೊಂಡಿದ್ದಳು." ಆಕೆಯ ಮನಸ್ಸು ಚಂಚಲವಾಗಿತ್ತು.

ನಮ್ಮಲ್ಲಿ ಅನೇಕರು ಮಾರ್ಥಳೊಂದಿಗೆ ಗುರುತಿಸಲ್ಪಡುತ್ತೇವೆ. ನಾವು ಬೈಬಲ್ ಕ್ಲಾಸಿನಲ್ಲಿ ಇಲ್ಲವೇ ಆರಾಧನೆಯಲ್ಲಿ ಇರಬಹುದು. ದೇವರ ವಾಕ್ಯವು ಪ್ರಸಂಗಿಸಲ್ಪಡು ತ್ತಿರುತ್ತದೆ. ಆದರೆ ನಮ್ಮ ಮನಸ್ಸು ಬೇರೆ ಸಂಗತಿಗಳನ್ನು ಯೋಚಿಸುತ್ತಿರುತ್ತದೆ. ಕೆಲವು ವಿಷಯಗಳಲ್ಲಿ ನಮ್ಮ ವಿಚಾರಗಳು ನಮ್ಮ ಮಧ್ಯಾಹ್ನದ ಊಟಕ್ಕೆ ನಮಗೆ ಏನಿರಬಹುದು ಎಂಬುದರ ಕಡೆಗೆ ತಿರುಗಿರಬಹುದು.[7]

"ಮಾಡಬೇಕಾಗಿದ್ದ ಎಲ್ಲಾ ಸಿದ್ಧತೆಗಳಿಂದ ಮಾರ್ಥಳ ಮನಸ್ಸು ಬೇರೆ ಕಡೆಗೆ ತಿರುಗಿಸಲ್ಪಟ್ಟಿತು" ಎಂದು NIV ಹೇಳುತ್ತದೆ. ಆಕೆಯ ಮನಸ್ಸಿನಲ್ಲಿ ಮಾಡಬೇಕಾದ ಈ ಸಿದ್ಧತೆಗಳು "ಇದ್ದವು." ಔತಣಕ್ಕಾಗಿ ಯೇಸು ಕೇಳಿದನೆಂಬ ಸೂಚನೆಯಿರುವದಿಲ್ಲ. ಆತನು ಅದನ್ನು ನಿರೀಕ್ಷಿಸಿರಲೂ ಇಲ್ಲ. ಔತಣವನ್ನು ಸಿದ್ಧಪಡಿಸುವುದು ಮಾಡಲೇ ಬೇಕಾದ ಸಂಗತಿಯೆಂದು ಯೋಚಿಸಿದಳು. ಹೆಚ್ಚಾದ ಸಮಯಗಳಲ್ಲಿ ನಮ್ಮ ಕೆಟ್ಟ ದಿನಗಳು ಅಕಾರಣವಾದ ನಿರೀಕ್ಷೆಗಳೊಂದಿಗೆ ಪ್ರಾರಂಭವಾಗುತ್ತವೆ. ಅದು ಇತರರ ಮನಸ್ಸುಗಳಲ್ಲಿ ಇರಲಿಕ್ಕಿಲ್ಲ. ಆದರೆ ನಮ್ಮ ಸ್ವಂತ ಮನಸ್ಸುಗಳಲ್ಲಿರಬಹುದು.[8] ಮಾರ್ಥಳ ಉದ್ದೇಶಗಳು ಒಳ್ಳೆಯವುಗಳೆಂದು ನಾನು ನಂಬುತ್ತೇನೆ. ಆಕೆ ಯೇಸುವಿಗಾಗಿ ಒಂದು ಔತಣ ಸಿದ್ಧಪಡಿಸಲು ಬಯಸಿದಳು; ತಾನು ಒದಗಿಸ ಬಹುದಾದ ಅತ್ಯುತ್ತಮ ಔತಣದೊಂದಿಗೆ ಯೇಸುವನ್ನು ಗೌರವಿಸಬೇಕೆಂದು ಆಕೆ ಬಯಸಿದ್ದಳು. ಹೀಗಿದ್ದರೂ ಔತಣವನ್ನು ಸಿದ್ಧಪಡಿಸುವುದೇ ಮಾಡತಕ್ಕ ಸಂಗತಿಯಾಗಿರಲಿಲ್ಲ.[9]

ಅದನ್ನು ಮಾಡಲೇ ಬೇಕೆಂದು ಆಕೆ ಯೋಚಿಸಿದ್ದರಿಂದ ಆಕೆ ಯೇಸುವಿನ ಬಳಿಗೆ ಬಂದು, "ಕರ್ತನೇ, ನನ್ನ ತಂಗಿಯು ಸೇವೆಗೆ ನನ್ನೊಬ್ಬಳನ್ನೇ ಬಿಟ್ಟು ಬಿಟ್ಟಿದ್ದಾಳೆ, ಇದಕ್ಕೆ

ನಿನಗೆ ಚಿಂತೆಯಿಲ್ಲವೋ? ನನಗೆ ನೆರವಾಗ ಬೇಕೆಂದು ಆಕೆಗೆ ಹೇಳು" (ವ. 40ಬಿ) ಎಂದಳು. "ನನ್ನಷ್ಟಕ್ಕೆ ನಾನೇ ಕೆಲಸ ಮಾಡುವಂತೆ ನನ್ನ ತಂಗಿ ಬಿಟ್ಟುಬಿಟ್ಟಿದ್ದಾಳೆ" ಎಂದು NIV ಹೇಳುತ್ತದೆ. ಇದರ ಮೊದಲು ಮಾರ್ಥಳು ಮರಿಯಳಿಗೆ "ಸೂಕ್ಷ್ಮವಾದ ಸೂಚನೆಗಳನ್ನು" ಕೊಟ್ಟಿರ ಬಹುದೆಂದು ನಾನು ಊಹಿಸುತ್ತೇನೆ. ಪಾತ್ರೆಗಳ ಸಪ್ಪಳ ಮಾಡುವುದು, ಕಪಾಟಿನ ಬಾಗಿಲು ಅಪ್ಪಳಿಸುವುದು, ಮರಿಯಳ ಕಡೆಗೆ ಅರ್ಥಗರ್ಭಿತ ದೃಷ್ಟಿಯಿಂದ ನೋಡಿದ್ದು ಇತ್ಯಾದಿ. "ನಾನು ಈ ಊಟವನ್ನು ಯಾವಾಗ ಮೇಜಿನ ಮೇಲಿಡುವೆನೋ" ಎಂದು ಗೊಣಗುಟ್ಟಿದ್ದು ಇರಬಹುದು.[10] ಮರಿಯಳು ಇದರ ಕಡೆಗೆ ಗಮನ ಕೊಡಲಿಲ್ಲ. ಯೇಸುವು ಹೇಳುತ್ತಿರುವದನ್ನು ಕೇಳುವದರಲ್ಲಿ ಮಗ್ನಳಾಗಿದ್ದಳು. ಮಾರ್ಥಳು ಹೇಳುವದನ್ನು ಕೇಳಿಸಿಕೊಳ್ಳಲಿಲ್ಲ.

ಮಹಿಳೆಯರೆ, ನೀವು ಈ ದೃಶ್ಯವನ್ನು ಗುರುತಿಸ ಬಹುದು. ನಿಮ್ಮ ಮನೆಯಲ್ಲಿ ಬಂಧುಗಳು ತುಂಬಿಕೊಂಡಿರಬಹುದು.[11] ಅವರು ಮುಂದಿನ ಕೋಣೆಯಲ್ಲಿ ಕುಳಿತುಕೊಂಡು ಒಬ್ಬರನ್ನೊಬ್ಬರು ಪರಿಚಯ ಮಾಡಿಕೊಳ್ಳುತ್ತಾ, ನಗುತ್ತಾ, ಇರುವಾಗ, ನೀವೊಬ್ಬರೇ ಅಡಿಗೆ ಮನೆಯಲ್ಲಿ ಕೆಲಸ ಮಾಡುತ್ತಿರಬಹುದು, "ಯಾರಾದರೂ ಒಳಗೆ ಬಂದು ಇಲ್ಲಿ ನನಗೆ ಯಾಕೆ ಸಹಾಯ ಮಾಡಬಾರದು?" ಎಂದು ನಿಮ್ಮೊಳಗೆ ಕುದಿಯತೊಡಗುವಿರಿ.

ಮಾರ್ಥಳ ತಾಳ್ಮೆ ಮುಗಿದು ಹೋಗಿತ್ತು. ಆಕೆ ಯೇಸುವಿನ ಬಳಿಗೆ ಬಂದು ದೂರು ಹೇಳಿದಳು. "ಕರ್ತನೇ, ನಿನಗೆ ಚಿಂತೆಯಿಲ್ಲವೇ?" ಎಂದು ಕೂಗಿದಳು. ನಾವೆಲ್ಲರೂ ಅಲ್ಲಿದ್ದೇವೇ. ನಮಗೆ ಕೆಟ್ಟದಿನವಿದೆ. ನಾವು ಯೋಚಿಸಿದ ರೀತಿಯಲ್ಲಿ ಯಾವುದೂ ನಡೆಯುವದಿಲ್ಲ. ನಾವು ಜಾಗರೂಕರಾಗಿರದಿದ್ದರೆ ಮಾರ್ಥಳು ಬಿದ್ದ ಬಲೆಯಲ್ಲಿಯೇ ನಾವೂ ಬೀಳುವೆವು. "ಯೇಸುವೇ, ನನಗೆ ಈ ಎಲ್ಲಾ ಸಮಸ್ಯಗಳಿವೆ. ನಿನಗೆ ಚಿಂತೆಯಿಲ್ಲವೇ?"[12]

"ಕರ್ತನೇ, ನನ್ನ ತಂಗಿಯು ಸೇವೆಗೆ ನನ್ನೊಬ್ಬಳನ್ನೇ ಬಿಟ್ಟಿದ್ದಾಳೆ. ಇದಕ್ಕೆ ನಿನಗೆ ಚಿಂತೆಯಿಲ್ಲವೇ?" ಎಂದು ಮಾರ್ಥಳು ಹೇಳಿದಳು. "ಬಿಟ್ಟಿದ್ದಾಳೆ"ಎಂಬುದು ಮೊದಲು ಮರಿಯಳು ಮಾರ್ಥಳಿಗೆ ಸಹಾಯ ಮಾಡುತ್ತಿದ್ದು (ನಾವು ಹೇಳುವಂತೆ) ಯೇಸುವನ್ನು ಉಪಚರಿಸಲು - ಯೇಸುವಿನ ಸಂದರ್ಶನ ಮಾಡಲು ಬಿಟ್ಟು ಹೋದಳೆಂಬುದನ್ನು ಸೂಚಿಸುತ್ತದೆ. ಊಟದ ಸಿದ್ಧತೆ ಮಾಡುವಷ್ಟೇ ಅತಿಥಿಯನ್ನು ಸತ್ಕರಿಸುವುದು (ಅತಿಥಿಯೊಂದಿಗಿರುವದು) ಮಹತ್ವದ್ದಾಗಿದೆ. ಆ ಸಂಗತಿ ಮಾರ್ಥಳಲ್ಲಿ ಮರೆತು ಹೋಯಿತು. ಆಕೆ ಕೋಪಿಸಿಕೊಂಡಿದ್ದಳು, ಆಯಾಸಗೊಂಡಿದ್ದಳು ಮತ್ತು ಅಸಂತುಷ್ಟಳಾಗಿದ್ದಳು. ಆಕೆ ಮೇಜು ಸಿದ್ಧಪಡಿಸುವಾಗ ಮತ್ತೊಬ್ಬರು ಪಲ್ಯ ಸಿದ್ಧತೆ ಮಾಡಬೇಕೆಂದು ಬಯಸಿದಳು. "ಕರ್ತನೇ, ನನಗೆ ನೆರವಾಗ ಬೇಕೆಂದು ಆಕೆಗೆ ಹೇಳು." (ನಿಮ್ಮ ಮಕ್ಕಳು ಒಳಗೆ ಬರುವಾಗ, " ಆಕೆಗೆ ಹೊರಗೆ ಹೋಗುವಂತೆ ಹೇಳು" ಇಲ್ಲವೇ "ಅಪ್ಪಾ, ನನ್ನನ್ನು ಒಬ್ಬನೇಯಾಗಿ ಬಿಟ್ಟು ಅವನನ್ನು ಹೊರಗೆ ಹೋಗು ಎಂದು ಹೇಳು" ಎಂದು ಹೇಳುವರಲ್ಲವೇ!) ಮಾರ್ಥಳು ಕೇವಲ ಮರಿಯಳನ್ನು ಮಾತ್ರವೇ ಗದರಿಸುತ್ತಿರಲಿಲ್ಲ: ಆಕೆ ಯೇಸುವನ್ನೂ ಗದರಿಸುತ್ತಿದ್ದಳು.

ಮಾರ್ಥಳ ಒಳ್ಳೆಯ ದಿನವನ್ನು ಕೆಟ್ಟದ್ದನ್ನಾಗಿ ತಿರುಗಿಸಲು ಸಂಭವಿಸಿದ್ದೆಲ್ಲವೂ ನನಗೆ ತಿಳಿದಿರುವದಿಲ್ಲ. ಕುರಿಮಾಂಸ ಒಣಗಿರಬಹುದು, ಕೇಕು ಬಿದ್ದಿರಬಹುದು. ಬಿಸ್ಕೀಟುಗಳು ಹೊತ್ತಿರಬಹುದು, ಎಲ್ಲಕ್ಕಿಂತಲೂ ಹೆಚ್ಚಾಗಿ ತಲೆಸಿಡಿಯುವಂಥ ತಲೆನೋವಿನ ಬಾಧೆ. ನನಗಿದು ತಿಳಿದಿದೆ: ಏನೇ ಸಂಭವಿಸಿರಲಿ, ಮಾರ್ಥಳು ದೂರು ಹೇಳುವದರಿಂದ ಅದನ್ನು ಇನ್ನೂ ಕೆಟ್ಟದ್ದನ್ನಾಗಿ ಮಾಡಿದಳು. ಅದು ನಿಮಗೆಂದಾದರೂ ಸಂಭವಿಸಿರುವುದೋ?

ನಮಗೆ ಕೆಟ್ಟ ದಿನವಿರುವಾಗ ಯಾವುದೋ ಕೆಟ್ಟ ಕಾರಣದಿಂದ ನಮ್ಮ ಸುತ್ತಲೂ ಇರುವವರಲ್ಲಿಯೂ ಕೆಟ್ಟ ದಿನವಿರಬೇಕೆಂದು ನಾವು ತೀರ್ಮಾನಿಸಿಕೊಳ್ಳುತ್ತೇವೆ.

ಸಂತೋಷಕರವಾದ ಮನೆಯ ದೃಶ್ಯದೊಂದಿಗೆ ನಾವು ಪ್ರಾರಂಭಿಸಿದೆವು: ಯೇಸು ದೇವರ ವಾಕ್ಯವನ್ನು ಬೋಧಿಸುತ್ತಿದ್ದನು. ಮರಿಯಳು ಆತನ ಪಾದಗಳ ಬಳಿಯಲ್ಲಿದ್ದನು, ಊಟ ಸಿದ್ಧಪಡಿಸುತ್ತಿದ್ದ ರುಚಿಕರವಾದ ಸುವಾಸನೆ - ಒಂದು ಒಳ್ಳೆಯ ದಿನ. ಆ ಮೇಲೆ ದಿನವು ಕಹಿಯಾಗಿ ಮಾರ್ಪಟ್ಟಿತು. ಮಾರ್ಥಳ ಮನೆಯಲ್ಲಿ ಮಂಕು ಕವಿಯಿತು. ಅಷ್ಟುಮಹತ್ವವಾಗಿರದ ಸಂಗತಿಗಳನ್ನು ಕುರಿತು ಮಾರ್ಥಳು ಬಹಳ ಚಿಂತೆಯುಳ್ಳವಳಾದದ್ದು ಇದಕ್ಕೆ ಕಾರಣ.

ಒಳ್ಳೆಯ ದಿನವನ್ನು ಕೆಟ್ಟ ದಿನವಾಗಿ ಮಾಡುವುದು ಬಹಳ ಕಠಿಣವಾದದ್ದಲ್ಲವೆ. ನಾವು ಇಷ್ಟು ಮಾಡಿದರೆ ಸಾಕು - ಸ್ವಲ್ಪ ತಾಳ್ಮೆಯಿಲ್ಲದೇ ಇರುವುದು ... ನಮ್ಮ ಮೇಲೆ ಕರುಣೆಪಟ್ಟು ಕೊಳ್ಳುವುದು ... ಯೋಚಿಸದೇ ಕೆಲವು ಮಾತುಗಳನ್ನು ಹೇಳುವುದು. ಹೆಚ್ಚಾದ ಸಂದರ್ಭ ಗಳಲ್ಲಿ ಮಾರ್ಥಳು ಮಾಡಿದಂತೇ ದೂರು ಹೇಳಲು ನಮ್ಮ ಬಾಯಿಗಳನ್ನು ತೆರೆಯುವಾಗ ಆ ಸಂತೋಷದ ದಿನವನ್ನು ಸಂತೋಷವಿಲ್ಲದ ದಿನವನ್ನಾಗಿ ಬದಲಾಯಿಸುವುದು.

### ಕೆಟ್ಟದ್ದಾಗಿ – ಆಮೇಲೆ ಉತ್ತಮವಾದ ಒಂದು ದಿನ (41, 42 ವಚನಗಳು)

ದಿನವು ಸ್ವಲ್ಪಹೊತ್ತು ಕೆಟ್ಟದ್ದಾಗಿ ತಿರುಗಿತು. ಮಾರ್ಥಳು ಯೇಸುವನ್ನು ಗದರಿಸಿದ್ದಳು; ಈಗ ಅವಳು ಗದರಿಸಲ್ಪಡುವಳು.

> ಕರ್ತನು ಆಕೆಗೆ - ಮಾರ್ಥಳೇ, ಮಾರ್ಥಳೇ, ನೀನು ಅನೇಕ ವಿಷಯ ವಾಗಿ ಚಿಂತೆಯಲ್ಲಿಯೂ ಗಡಿಬಿಡಿಯಲ್ಲಿಯೂ ಸಿಕ್ಕಿಕೊಂಡಿದ್ದೀ. ಕೆಲವು ಮಾತ್ರ ಬೇಕಾದದ್ದು, ಅಥವಾ ಒಂದೇ, ಮರಿಯಳು ಆ ಉತ್ತಮ ಭಾಗವನ್ನು ಆರಿಸಿ ಕೊಂಡಿದ್ದಾಳೆ; ಅದು ಆಕೆಯಿಂದ ತೆಗೆಯಲ್ಪಡುವದಿಲ್ಲ ಎಂದು ಉತ್ತರ ಕೊಟ್ಟನು (41, 42 ವಚನಗಳು).

ಉಪಯೋಗಿಸಿದ ಧ್ವನಿಯ ಏರಿಳಿತಗಳನ್ನು ನಾವು ತಿಳಿದು ಕೊಳ್ಳಲಿಕ್ಕಾಗುವಂತೆ ಬೈಬಲಿನ ಸಂವಾದಗಳು ಧ್ವನಿಸುರುಳಿಯಲ್ಲಿದ್ದಿರಬೇಕೆಂದು ನಾನು ಆಗಾಗ ಬಯಸಿ ದ್ದೇನೆ. ಯೇಸು ಮಾರ್ಥಳೊಂದಿಗೆ ಉಪಯೋಗಿಸಿದ ಧ್ವನಿಯ ಸ್ವರಭಾರವನ್ನು ಊಹಿಸ ಬಹುದೆಂದು ನಾನು ಯೋಚಿಸುವದಿಲ್ಲ. "ಯೇಸುವಿಗೆ ಮಾರ್ಥಳ ಮೇಲೆ ಪ್ರೀತಿಯಿತ್ತು" ಎಂದು ಯೋಹಾನ 11:5 ಹೇಳುತ್ತದೆ. ಒರಟಾದ ಮತ್ತು ಕರ್ಕಶವಾದ ಧ್ವನಿ ಉಪಯೋಗಿಸಿ ಯೇಸು ಗದರಿಸಿದ್ದನ್ನು ಓದುವುದು ಅಸಾಧ್ಯವಾದದ್ದಾಗಿದೆ. ಹೇಳಿಕೆಯು "ಮಾರ್ಥಳೇ, ಮಾರ್ಥಳೇ ..." ಎಂದು ತಲೆ ಅಲ್ಲಾಡಿಸಿ ಅಸಂತೋಷದಿಂದ ಹೇಳಿದ್ದಾಗಿರಬಹುದು. ಯೇಸುವಿನ ಮಾತುಗಳಲ್ಲಿ ನಿರಾಶೆಯಿತ್ತು, ಆದರೆ ಪ್ರೀತಿಯೂ ಸಹ ಇತ್ತು.

"ಮಾರ್ಥಳೇ, ಮಾರ್ಥಳೇ, ನೀನು ಅನೇಕ ವಿಷಯವಾಗಿ ಚಿಂತೆಯಲ್ಲಿಯೂ ಗಡಿಬಿಡಿಯಲ್ಲಿಯೂ ಸಿಕ್ಕಿಕೊಂಡಿದ್ದೀ." ನ್ಯೂ ಇಂಗ್ಲಿಷು ಬೈಬಲಿನಲ್ಲಿ "ಅನೇಕ ಸಂಗತಿಗಳ ಬಗ್ಗೆ ಕೆರಳುವವಳೂ ಗಲಿಬಿಲಿಯುಳ್ಳವಳೂ ಆಗಿರುವಿ" ಎಂದಿದೆ. "ಚಿಂತೆಯಲ್ಲಿಯೂ" "ಗಡಿಬಿಡಿಯಲ್ಲಿಯೂ" ಎಂಬುದಾಗಿ ಭಾಷಾಂತರಿಸಲ್ಪಟ್ಟ ಗ್ರೀಕ ಪದವು "ತುಂಡು" (piece) ಎಂಬ ಅರ್ಥವುಳ್ಳ ಮೂಲ ಪದದಿಂದ ಬಂದಿದೆ. ಮಾರ್ಥಳು ತಾನು ಮಾಡ ಬೇಕೆಂದು ಯೋಚಿಸಿದ ಎಲ್ಲಾ ಸಂಗತಿಗಳಿಂದ "ತುಂಡಾಗುತ್ತಿರುವಳು"[13] ಆಕೆಯ ಅಂತರಂಗವು ಒಡೆಯಲ್ಪಟ್ಟಿದ್ದು ಅದು ಬಾಹ್ಯದಲ್ಲಿ ಪರಿಣಾಮ ಮಾಡುತ್ತಿದೆ. ಆಕೆ ತನ್ನ

ಸುತ್ತಲಿನ ಪ್ರತಿಯೊಬ್ಬರ ಜೀವನವನ್ನೂ ದುಃಖಕರವಾದದ್ದಾನ್ನಾಗಿ ಮಾಡುತ್ತಿದ್ದಾಳೆ.

"ಕೆಲವು ಮಾತ್ರ ಬೇಕಾದದ್ದು ಅಥವಾ ಒಂದೇ" ಎಂದು ಯೇಸು ಮುಂದುವರಿಸಿದನು. ಒಂದೇ ಒಂದು ಅವಶ್ಯವಾದದ್ದು ಎಂದು ಯೇಸು ಹೇಳಿದಾಗ, ಆಹಾರದ ಒಂದೇ ಒಂದು ಭಕ್ಷ್ಯ ಸಾಕಾಗುವದೆಂದು ಅರ್ಥವಿತ್ತೆಂದು ಕೆಲವು ವ್ಯಾಖ್ಯಾನಕಾರರು ಯೋಚಿಸುತ್ತಾರೆ. ಯೇಸುವು ಊಟದ ಬಗ್ಗೆ ಮಾತಾಡುತ್ತಿರುವುದು ನನಗೆ ಸಂಶಯವಿದೆ. ಆದರೆ ಸಾಧಾರಣವಾದ ಊಟ ಮತ್ತು ಸಂತೋಷದಿಂದ ಇದ್ದ ಮಾರ್ಥಳೊಂದಿಗೆ ಪ್ರತಿಯೊಬ್ಬರು ನಿಶ್ಚಯವಾಗಿ ಸಂತುಷ್ಟ ರಾಗಿರುತ್ತಿದ್ದರು.

ಒಂದು "ಅವಶ್ಯವಾದ" ಸಂಗತಿಯನ್ನು ಯೇಸು ತನ್ನ ಮುಂದಿನ ಮಾತುಗಳಲ್ಲಿ ಗುರುತಿಸಿದನು: "ಮರಿಯಳು ಆ ಉತ್ತಮ ಭಾಗವನ್ನು ಆರಿಸಿಕೊಂಡಿದ್ದಾಳೆ. ಅದು ಆಕೆಯಿಂದ ತೆಗೆಯಲ್ಪಡುವದಿಲ್ಲ." ಮರಿಯಳು ಆತ್ಮಿಕವಾದದ್ದನ್ನು ಆಯ್ದು ಕೊಂಡಿದ್ದಾಳೆ; ಮರಿಯಳು ನಿತ್ಯವಾದದ್ದನ್ನು ಆಯ್ದುಕೊಂಡಿದ್ದಾಳೆ. ಮರಿಯಳು ಯೇಸುವನ್ನು ಆಲಿಸುವದನ್ನು ಆಯ್ದುಕೊಂಡಿದ್ದಾಳೆ. ದೈಹಿಕ ಆಹಾರಕ್ಕಿಂತ ಹೆಚ್ಚಾಗಿ ಆಕೆ ಆತ್ಮಿಕ ಆಹಾರವನ್ನು ಕುರಿತು ಹೆಚ್ಚು ಚಿಂತಿಸುವವಳಾಗಿದ್ದಾಳೆ.

ನಮ್ಮ ಅನೇಕ ಒಳ್ಳೆಯ ದಿನಗಳೂ ಕೆಟ್ಟದಿನಗಳಾಗಿ ಬದಲಾಗುವವು. ಯಾಕಂದರೆ ನಾವು "ಅನೇಕ ಸಂಗತಿಗಳ ಬಗ್ಗೆ ಚಿಂತೆಯಲ್ಲಿಯೂ ಗಡಿಬಿಡಿಯಲ್ಲಿಯೂ ಇರುವವರಾಗಿದ್ದೇವೆ. ನಿಜವಾಗಿಯೂ ಅವಶ್ಯವಾಗಿ ಇರುವ ಸಂಗತಿಗಳ ಬಗ್ಗೆ ಚಿಂತಿಸುವವರಾಗಿರದೇ," ಇಂದು ಇಲ್ಲಿದ್ದು ನಾಳೆ ಹೋರಟು ಹೋಗುವ - ಇಪ್ಪತ್ತು ವರ್ಷಗಳ ನಂತರ ಯಾರಿಗೂ ಸಂಬಂಧಿಸದಂತಿರುವ ಸಂಗತಿಗಳ ಬಗ್ಗೆ ತಲೆ ಕೆಡಿಸಿಕೊಳ್ಳುವದರಿಂದ ಸದಾಕಾಲಕ್ಕೂ ಇರುವ ದೇವರೊಂದಿಗಿನ ಸಂಬಂಧವನ್ನು ಹಾಳುಮಾಡುತ್ತೇವೆ.

ಈ ಪಾಠವನ್ನು ಅಧ್ಯಯನ ಮಾಡುವಾಗ, ತಂದೆಯಾಗಿ ತಾತನಾಗಿ ಇದನ್ನು ನನಗೇ ಅನ್ವಯಿಸಿಕೊಳ್ಳುತ್ತೇನೆ. ನನ್ನ ಮಕ್ಕಳು, ಮೊಮ್ಮಕ್ಕಳಿಗಾಗಿ ನಾನು ಯಾವುದನ್ನು ಬಿಡುವುದಕ್ಕೆ ಹೆಚ್ಚಾಗಿ ಚಿಂತಿಸುತ್ತೇನೆ? ಅವರಿಗೆ ಒಳ್ಳೆಯ ಸಂಗತಿಗಳನ್ನು ಬಿಡುವ ಅಪೇಕ್ಷೆಯಲ್ಲಿ - ದಾಟಿ ಹೋಗುವ ಸಂಗತಿಗಳಲ್ಲಿ - ಸಿಕ್ಕಿ ಕೊಂಡಿರುವೆನೋ! ಅವರಿಗೆ ಅತೀ ಅಗತ್ಯವಾದ ಸಂಗತಿಗಳ ಬಗ್ಗೆ - ಅಂದರೆ ದೇವರ ವಾಕ್ಯಕ್ಕಾಗಿರುವ ಪ್ರೀತಿಯ ಬಗ್ಗೆ - ಅವರಿಗೆ ಭರವಸೆ ಕೊಡಲು ಅಗತ್ಯವಾದ ಸಮಯವನ್ನು ಕೊಡುತ್ತಿರುವದಿಲ್ಲವೋ?[14]

ಯೇಸು ಮಾರ್ಥಳನ್ನು ಗದರಿಸುತ್ತಿದ್ದಾಗ ಈ ದಿನ ಹೆಚ್ಚು ಕೆಟ್ಟದ್ದಾಯಿತು. "ನೀನು ಯಾವುದೇ ಸಮಯದಲ್ಲಿ ಅಡಿಗೆ ಮಾಡಬಹುದು. ಆದರೆ ನಾನು ಇಲ್ಲಿ ಸ್ವಲ್ಪಸಮಯ ಮಾತ್ರ ಇರುತ್ತೇನೆ. ಈ ಅವಕಾಶವನ್ನು ಕಳೆದುಕೊಳ್ಳಬೇಡ!" ಎನ್ನುವ ರೀತಿಯಲ್ಲಿ ಯೇಸು ಹೇಳಿದನು. ನಮ್ಮೆಲ್ಲರಿಗೂ ಈ ಪಾಠದ ಅವಶ್ಯಕತೆಯಿದೆ. ನಮ್ಮ ಪ್ರಾಧಾನ್ಯತೆಗಳನ್ನು ಮಿಶ್ರಮಾಡುವುದು ಎಷ್ಟು ಸುಲಭವಾಗಿದೆ.

ಅದೇ ಸಮಯದಲ್ಲಿ ಮಾರ್ಥಳು ಯೇಸುವಿನ ಮಾತುಗಳ ಮೇಲೆ ಆಲೋಚಿಸಿದಂತೆ ದಿನವು ಹೆಚ್ಚು ಉತ್ತಮವಾಗುತ್ತ ಬಂದಿತೆಂದು ನನಗೆ ನಿಶ್ಚಿತತೆಯಿದೆ. ಉಳಿದ ದಿನವನ್ನು ನಾನು ನೋಡುವುದು ಹೀಗಿದೆ: ಪ್ರಾರಂಭದಲ್ಲಿ ಅಲ್ಲಿ ತೊಂದರೆಗೆ ಗುರಿಯಾದ ವಾತಾವರಣವಿತ್ತು. ಮಾರ್ಥಳು ಊಟ ಸಿದ್ಧಪಡಿಸಿ, ಅದನ್ನು ಬಡಿಸಿದಳು. ಊಟದ ಬಗ್ಗೆ ಮೆಚ್ಚಿಕೆ ವ್ಯಕ್ತಪಡಿಸಿ, ಆಕೆ ಉತ್ತಮ ಭಾವನೆ ಹೊಂದುವಂತೆ ಯೇಸು ನಡಿಸಿದನು. ಮಾರ್ಥಳು ಮೌನವಾಗಿದ್ದಳು; ಆಕೆಯೆ ಹೃದಯದಲ್ಲಿ ಯೇಸುವಿನ ಮಾತುಗಳು ಕಾರ್ಯಮಾಡುವಾಗ ವಿಚಾರಭರಿತಳಾಗಿದ್ದಳು.

ಮಾರ್ಥಳಲ್ಲಿ ಬದಲಾವಣೆಯಾಗಿದ್ದರಿಂದ ಈ ರೀತಿಯಲ್ಲಿ ದಿನದ ಉಳಿದ ಭಾಗದ

ಬಗ್ಗೆ ಚಿತ್ರಿಸಿಕೊಳ್ಳುತ್ತೇನೆ. ಮುಂದಿನ ಸಲ ಮಾರ್ಥಳು ಸೇವೆ ಮಾಡುತ್ತಿರುವದನ್ನು ಯೋಹಾನ 12ರಲ್ಲಿ ನೋಡುತ್ತೇವೆ. ಆ ಸಂದರ್ಭದಲ್ಲಿ ಸಿದ್ಧತೆ ಮಾಡಲು ಮಾರ್ಥಳಿಗೆ ಪುನಃ ದೊಡ್ಡ ಗುಂಪು ಇತ್ತು. ಆ ಸಂದರ್ಭದಲ್ಲಿ ಪುನಃ ಮರಿಯಳು ಮಾರ್ಥಳಿಗೆ ಸಹಾಯ ಮಾಡಲಿಲ್ಲ. ಆದರೂ ಮಾರ್ಥಳು ದೂರು ಹೇಳಲಿಲ್ಲ. ಮರಿಯಳು ಬಹು ಬೆಲೆಯುಳ್ಳ ಸುಗಂಧದ್ರವ್ಯದ ಭರಣಿಯನ್ನು - ಕುಟುಂಬದ ಆಸ್ತಿಯನ್ನು - ಬಹುಶಃ ಕುಟುಂಬದ ಉಳಿತಾಯವನ್ನು ತಂದು ಯೇಸುವಿನ ಪಾದಗಳಿಗೆ ಅಭಿಷೇಕ ಮಾಡಲು ಎಲ್ಲವನ್ನೂ ಉಪಯೋಗಿಸಿದಾಗಲೂ ಮಾರ್ಥಳು ದೂರು ಹೇಳಲಿಲ್ಲ. ಕೆಲವು ವಾರಗಳ ಮೊದಲಿನ “ಕೆಟ್ಟ ದಿನದಂದು” ಮಾರ್ಥಳು ಒಂದು ಅತ್ಯವಶ್ಯಕವಾದ ಸಂಗತಿಯನ್ನು ಕುರಿತು, ತೆಗೆದು ಹಾಕಲಾಗದಂಥ ಒಳ್ಳೇ ಸಂಗತಿಯನ್ನು ಕಲಿತು ಕೊಂಡಿದ್ದಳು.

ಸಂಭವಿಸುವ ಕೆಟ್ಟ ಸಂಗತಿಗಳಿಂದ ನಾವು ಕಲಿಯುವಾಗ ಕೆಟ್ಟದಿನವೂ ಒಳ್ಳೆಯ ದಿನವಾಗುವುದು.

ಮಾರ್ಥಳು ಸಹಜವಾಗಿ ತನ್ನ ಕೆಟ್ಟ ದಿನದಿಂದ ಲಾಭಪಡೆದುಕೊಂಡಳು. ಸತ್ಯವೇದದ ಫೋಟೊ ಅಲ್‌ಬಮ್‌ದಿಂದ ಕೆಲವು ಪುಟಗಳನಂತರ ಮಾರ್ಥಳು ಎರಡನೆಯ ಚಿತ್ರವನ್ನು ನಿಮಗೆ ತೋರಿಸದೇ ಈ ಅಧ್ಯಾಯವನ್ನು ಮುಕ್ತಾಯಗೊಳಿಸಲು ಬಯಸುವದಿಲ್ಲ. ಮಾರ್ಥಳು ಒಳ್ಳೆಯ ದಿನವನ್ನು ನೋಡಲು ಯೋಹಾನ 11ಕ್ಕೆ ತಿರುಗಿರಿ.

ಲಾಜರನು ಸತ್ತನಂತರ ಯೇಸು ಬೇಥಾನ್ಯಕ್ಕೆ ಹೋದಾಗ, ಮಾರ್ಥಳು ಆತನಿಗೆ, “ಕರ್ತನೇ, ನೀನು ಇಲ್ಲಿರುತ್ತಿದ್ದರೆ ನನ್ನ ತಮ್ಮನು ಸಾಯುತ್ತಿರಲಿಲ್ಲ. ಈಗಲಾದರೂ ದೇವರನ್ನು ಏನು ಬೇಡಿಕೊಳ್ಳುತ್ತೀಯೋ ಅದನ್ನು ದೇವರು ನಿನಗೆ ಅನುಗ್ರಹಿಸುವನೆಂದು ಬಲ್ಲೆನು” ಎಂದು ಹೇಳಿದಳು (ಯೋಹಾನ 11:21, 22). ಅದು ವಿಶ್ವಾಸದ ಅತೀ ಅದ್ಭುತಕರವಾದ ಪ್ರಕಟನೆಯಾಗಿದೆಯಲ್ಲವೇ! ಪುನಃ ವಚನ 27ರಲ್ಲಿ ಆಕೆಯ ಮಾತು ಗಳನ್ನು ಗಮನಿಸಿರಿ: “ಹೌದು, ಕರ್ತನೇ, ಲೋಕಕ್ಕೆ ಬರಬೇಕಾದ ದೇವಕುಮಾರನಾದ ಕ್ರಿಸ್ತನು ನೀನೇ ಎಂದು ನಂಬಿದ್ದೇನೆ” ಅಂದಳು. “ನಾನು ನಂಬಿದ್ದೇನೆ” ಎಂಬುದು ಪರಿಪೂರ್ಣಕಾಲದಲ್ಲಿ ಇದ್ದು ಮಾರ್ಥಳು ಈಗ ಭೂತಕಾಲದಲ್ಲಿ ನಂಬಿಕೆಯಿಟ್ಟು ಈಗ ಆಕೆಯ ಹೃದಯದಲ್ಲಿ ವಿಶ್ವಾಸವು ಸ್ಥಿರವಾದ ನಂಬಿಕೆಯಾಗಿದೆ ಎಂಬುದನ್ನು ಸೂಚಿಸುತ್ತದೆ. ಅನಂತರದಲ್ಲಿ ಯೋಹಾನನು ಹೀಗೆ ಬರೆದನು, “ಯೇಸು ಇನ್ನು ಬೇರೆ ಎಷ್ಟೋ ಸೂಚಕ ಕಾರ್ಯಗಳನ್ನು ತನ್ನ ಶಿಷ್ಯರ ಮುಂದೆ ಮಾಡಿದನು. ಅವುಗಳು ಈ ಗ್ರಂಥದಲ್ಲಿ ಬರೆದಿರುವದಿಲ್ಲ ಆದರೆ ಯೇಸು ದೇವಕುಮಾರನಾದ ಕ್ರಿಸ್ತನೆಂದು ನೀವು ನಂಬುವಂತೆಯೂ, ಇಷ್ಟೆಲ್ಲಾ ಬರೆದದೆ” (ಯೋಹಾನ 20:30, 31). ಯೇಸುವನ್ನು ವಿವರಿಸಲು ಯೋಹಾನನು ಮಾರ್ಥಳು ಉಪಯೋಗಿಸಿದ ಶಬ್ದಗಳನ್ನು ಉಪಯೋಗಿ ಸಿದನು. ನಿನಗೂ ನನಗೂ ಅಗತ್ಯವಾ ಗಿರುವ ವಿಶ್ವಾಸದ ರೀತಿಯನ್ನು ಉದಾಹರಿಸಲು ಯೋಹಾನನು ಮಾರ್ಥಳನ್ನು ಉಪ ಯೋಗಿಸಿದನು.

ನಾವು ಅವುಗಳಿಂದ ಕಲಿತುಕೊಳ್ಳುವಾಗ ಮತ್ತು ಅದರ ಪರಿಣಾಮವಾಗಿ ನಾವು ಬಲಶಾಲಿಗಳಾದಾಗ ಕೆಟ್ಟದಿನಗಳು ಒಳ್ಳೆಯವುಗಳಾಗುವವು. ಇದು ಹೀಗಿರುವಾಗ ನಾವು ಕೆಟ್ಟ ದಿನಗಳನ್ನು ಹಿಂದೆ ನೋಡಿ, “ನನಗೆ ಬೋಧಿಸಲು ಮತ್ತು ನನ್ನನ್ನು ಕಟ್ಟಲು ದೇವರು ಆ ದಿನಗಳನ್ನು ಉಪಯೋಗಿಸಿದನು” ಎಂದು ಹೇಳಬಹುದು. ಯೇಸುವು ನಿಜವಾಗಿಯೂ ಚಿಂತಿಸುವಾತನು ಎಂದು ನಾವು ತಿಳಿಯಬಹುದು.

## ನಮಗೆ ಕೆಟ್ಟ ದಿನಗಳು ಇರುವಾಗ

ನಮಗೆ ಕೆಟ್ಟದಿನಗಳಿರುವಾಗ ನಾವು ಯಾವ ಪಾಠಗಳನ್ನು ಕಲಿಯತಕ್ಕದ್ದು? ಇಲ್ಲಿ ಕೆಲವು ಇವೆ:

**ಆಗಾಗ ಪ್ರತಿಯೊಬ್ಬರಿಗೂ ಕೆಟ್ಟದಿನ ವಿರುವದೆಂಬುದನ್ನು ಗುರುತಿಸಿಕೊಳ್ಳಬೇಕು**

ಕೆಲವು ಸಮಯಗಳಲ್ಲಿ ಕೆಟ್ಟದಿನಗಳಿದ್ದ ನಂಬಿಗಸ್ಥ ಸ್ತ್ರೀ ಪುರುಷರಿಂದ ಸತ್ಯವೇದವು ತುಂಬಿರುವುದು. ಎಲೀಯನಿಗೆ ಅವನ ಕೆಟ್ಟದಿನಗಳು ಇದ್ದವು. ಪುನಃ ಪುನಃ ಧೈರ್ಯಶಾಲಿ ಪ್ರವಾದಿಯು ದುಷ್ಟ ಶಕ್ತಿಗಳ ವಿರುದ್ಧ ಒಬ್ಬನೇ ನಿಂತುಕೊಂಡನು. ಆದರೂ ಒಂದು ದಿನ ಎಲೀಯನು ಒಂದು ಗವಿಯಲ್ಲಿ ಅವಿತುಕೊಂಡು ಮರಣವನ್ನು ಬಯಸಿದನು (1 ಅರಸು 19). ಇನ್ನೊಬ್ಬ ಪ್ರವಾದಿ, ಯೆರಮೀಯನಿಗೆ ಅನೇಕ ಕೆಟ್ಟದಿನಗಳಿದ್ದವು.

ಸ್ನಾನಿಕನಾದ ಯೋಹಾನನಿಗೆ ಕೆಟ್ಟ ದಿನವಿತ್ತು. ಅವನು ಸೆರೆಮನೆಯಲ್ಲಿ ಬಂಧಿಸಲ್ಪಟ್ಟನಂತರ, ತನ್ನ ಶಿಷ್ಯರನ್ನು ಯೇಸುವಿನ ಬಳಿಗೆ ಕಳುಹಿಸಿ, "ಬರಬೇಕಾದವನು ನೀನೋ, ನಾವು ಮತ್ತೊಬ್ಬನ ದಾರಿಯನ್ನು ನೋಡಬೇಕೋ?" ಎಂದು ಕೇಳಿಸಿದನು (ಲೂಕ 7:20). "ಅಗೋ (ಯಜ್ಞಕ್ಕೆ) ದೇವರು ನೇಮಿಸಿದ ಕುರಿ, ಲೋಕದ ಪಾಪವನ್ನು ನಿವಾರಣೆ ಮಾಡುವವನು" (ಯೋಹಾನ 1:29, 36) ಎಂದು ಯೋಹಾನನು ಯೇಸುವಿನ ಬಗ್ಗೆ ನಿಶ್ಚಿತವಾಗಿ ಹೇಳಿದನಂತರ ಇದಾಯಿತು. ಹೀಗಿದ್ದರೂ ಸೆರೆಮನೆಯಲ್ಲಿ ಕತ್ತಲೆ, ಛಳಿ, ಜವುಳು ಹಾಗೂ ಏಕಾಂಗಿತನವು ಇತ್ತು - ಯೋಹಾನನಿಗೆ ಕೆಟ್ಟ ದಿನವಾಗಿತ್ತು.

**ನಮ್ಮ ಕೆಟ್ಟದಿನಗಳಿಗಾಗಿ ಇತರರನ್ನು ದೂರುವ ಪ್ರವೃತ್ತಿಯ ಬಗ್ಗೆ ಎಚ್ಚರಿಕೆಯಿಂದಿರಿ**

ಮಾರ್ಥಳು ತನ್ನ ಕೆಟ್ಟದಿನಕ್ಕಾಗಿ ಮರಿಯಳನ್ನು ಆಮೇಲೆ ಯೇಸುವನ್ನು ದೂರಿದಳು. ದೂರುವುದು ಮಾನವ ಪ್ರವೃತ್ತಿಯಾಗಿದ್ದು, ಅದನ್ನು ಎದುರಿಸತಕ್ಕದ್ದು. ನಮಗೆ ಕೆಟ್ಟ ದಿನವಿರುವಾಗ ಸಾಮಾನ್ಯವಾಗಿ ಅದು ಸಂಭವಿಸಿದ ಕೆಟ್ಟ ಸಂಗತಿಗಳ ನಿಮಿತ್ತವಾಗಿ ಅಲ್ಲ, ಆದರೆ ಸಂಭವಿಸಿದ್ದಕ್ಕೆ ನಾವು ಪ್ರತಿಕ್ರಿಯೆ ತೋರಿಸಿದ ರೀತಿಯಾಗಿರುವುದು.

**ನಮಗೆ ಸಂಭವಿಸುವದಕ್ಕೆ ನಾವು ಪ್ರತಿಕ್ರಿಯೆ ಮಾಡುವಾಗ ಪರಿಣಾಮಗಳು ಇರುತ್ತವೆಂಬುದನ್ನು ಗುರುತಿಸಿ ಕೊಳ್ಳಬೇಕು**

ಮಾರ್ಥಳು ಯೇಸುವಿನ ಕಡೆಗೆ ದೂರಿದಳು. ಅದರ ಪರಿಣಾಮವಾಗಿ ಆಕೆ ಯೇಸುವಿನಿಂದ ಗದರಿಸಲ್ಪಟ್ಟಳು. ಸಂಭವಿಸಿದ ಕೆಟ್ಟ ಸಂಗತಿಗಳಿಗೆ ನಿಷೇದಾರ್ಥಕ ರೀತಿಯಲ್ಲಿ ಪ್ರತಿಕ್ರಿಯೆ ಮಾಡಿದರೆ ಕೆಟ್ಟದಿನವೂ ಇನ್ನೂ ಕೆಟ್ಟದ್ದಾಗಿಯೇ ಇರುವುದು.

**ನಾವು ಅದನ್ನು ಹಾಗೆ ಮಾಡದಿದ್ದರೆ – ಕೆಟ್ಟದಿನವು ನಮ್ಮ ಜೀವಿತಗಳಲ್ಲಿ ಕೊನೆಯ ಮಾತಲ್ಲ ಎಂಬ ಸಂಗತಿಯಿಂದ ಆದರಣೆ ಹೊಂದುವಿರಿ**

ಮಾರ್ಥಳು ತನ್ನ ಜೀವನದಲ್ಲಿ ತನ್ನ ಕೆಟ್ಟದಿನವು ಕೊನೆಯ ಮಾತಾಗಿರುವಂತೆ ಬಿಟ್ಟು ಬಿಡಲಿಲ್ಲ. ಹೀಗೆ ಯೋಹಾನ 11 ಮತ್ತು 12ರಲ್ಲಿ ಮಾರ್ಥಳ ಸುಂದರವಾದ

ಚಿತ್ರಗಳಿರುವವು. ಹಾಗೆಯೇ ನಮ್ಮ ಕೆಟ್ಟದಿನಗಳು ಕಥೆಯ ಅಂತಿಮ ಬಾಗವಾಗುವಂತೆ ಬಿಟ್ಟುಬಿಡಬಾರದು.

**ಕೆಟ್ಟ ದಿನಗಳಿಂದ ನಮ್ಮ ಜೀವನದಲ್ಲಿ ನಿಜವಾಗಿಯೂ ಮಹತ್ವವುಳ್ಳದ್ದನ್ನು ಕಲಿಯಲು ತೀರ್ಮಾನಿಸಿಕೊಳ್ಳಬೇಕು**

ನಿನಗೆ ಕೆಟ್ಟದಿನವಿರುವಾಗ, ನಿಂತುಕೊಂಡು, "ಇದನ್ನು ಕೆಟ್ಟದಿನವಾಗಿ ಯಾವುದು ಮಾಡುವುದು? ನನ್ನ ಸಂತೋಷವನ್ನು ಯಾವುದು ಹಾಳು ಮಾಡುತ್ತಿರುವುದು? ನನ್ನ ಸುತ್ತಲೂ ಇರುವವರನ್ನು ದುಃಖಿತರನ್ನಾಗಿ ಮಾಡಲು ನನ್ನಲ್ಲಿ ಯಾವುದು ಕಾರಣವಾಗಿರುವುದು?" ಎಂದು ಪ್ರಶ್ನಿಸಿಕೊಳ್ಳಿರಿ. ಒಮ್ಮೆ ನೀವು ಕಾರಣವನ್ನು ಕಂಡುಕೊಳ್ಳುವಾಗ "ಇದು ಅಷ್ಟು ಮಹತ್ವವುಳ್ಳದ್ದೋ?" ಎಂದು ಕೇಳಿಕೊಳ್ಳಿರಿ. ನಮಗೆ ಸಂಭವಿಸುವಂಥವುಗಳಿಂದ ನಾವು ಕಲಿತುಕೊಳ್ಳುವದಾದರೆ ಆಗ ಕೆಟ್ಟದಿನಗಳು ಉತ್ತಮ ದಿನಗಳಾಗುವವು.

## ಮುಕ್ತಾಯ

ಪ್ರತಿಯೊಬ್ಬರಿಗೂ ಆಗಾಗ ಕೆಟ್ಟ ದಿನವಿರುವುದು. ಆದರೆ ನಿಮ್ಮ ಜೀವನದಲ್ಲಿ ಆತ್ಮಿಕ ಸಂಗತಿಗಳನ್ನು ಮೊದಲಿಡಲು ಮಾರ್ಥಳ ಕಥೆಯಿಂದ ನೀವು ಕಲಿತುಕೊಂಡರೆ ನಿನ್ನ ಜೀವನದಲ್ಲಿ ಅತ್ಯುತ್ತಮ ದಿನವಾಗುವುದು. ಒಂದು ಸಂಗತಿ ಅವಶ್ಯವಾದದ್ದು; ಒಂದು ಸಂಗತಿಯು ನಿಮ್ಮಿಂದ ಎಂದೂ ತೆಗೆಯಲ್ಪಡಲಾರದು - ಅದು ಕರ್ತನಿಗೆ ನಿಮ್ಮ ಸಮರ್ಪಣೆ. ಇಲ್ಲಿಯವರೆಗೆ ನಿಮಗೆ ಯಾವ ರೀತಿಯ ದಿನಗಳಿದ್ದವೆಂಬುದನ್ನು ನಾನು ತಿಳಿದಿರುವದಿಲ್ಲ. ಆದರೆ ಯೇಸುವಿನ ಪಾದಗಳ ಬಳಿಯಲ್ಲಿ ಕುಳಿತುಕೊಂಡು, ಆತನಿಂದ ಕಲಿತು ಕೊಳ್ಳುವಾಗ ಮತ್ತು ಆತನ ಚಿತ್ತವನ್ನು ಮಾಡುವಾಗ, ಅದನ್ನು ಒಳ್ಳೆಯ ದಿನವನ್ನಾಗಿ, ಮಾಹಾದಿನವನ್ನಾಗಿ ಮಾಡಬಹುದು.[15]

---

ಟಿಪ್ಪಣಿಗಳು

[1]ಮಹಿಳೆಯರಿಗೆ ಸಂಬಂಧಿಸುವ ಇನ್ನೊಂದು ದೃಷ್ಟಾಂತ: ಅಸ್ತವ್ಯಸ್ತವಾಗಿರುವ ಮನೆಯಲ್ಲಿ ಮಹಿಳೆಯನ್ನು ಸಂದರ್ಶಿಸುವಾಗ, "ಕೆಟ್ಟ ಸಮಯದಲ್ಲಿ ನೀವು ನನ್ನನ್ನು ಹಿಡಿದಿರಿ" "ನನ್ನ ಮನೆ ಸಾಮಾನ್ಯವಾಗಿ ಹೀಗೆ ಕಾಣುವದಿಲ್ಲ" ಇತ್ಯಾದಿಯಾಗಿ ಹೇಳುವಳು. [2]ಅನಂತರ, ಬೇಥಾನ್ಯದಲ್ಲಿ ಯೇಸು ಔತಣಕ್ಕಾಗಿ ಆಮಂತ್ರಿಸಲ್ಪಟ್ಟಾಗ, ಕಥೆಯಲ್ಲಿ ಮೊದಲಾಗಿ ಶಿಷ್ಯರ ಬಗ್ಗೆ ಹೇಳಲಾಗಿಲ್ಲ (ಯೋಹಾನ 12:1, 2). ಹೀಗಿದ್ದರೂ ಯೇಸುವಿನ ಶಿಷ್ಯರು ಅಲ್ಲಿದ್ದರು (ಯೋಹಾನ 12:4; ಮತ್ತಾಯ 26:8). [3]ಮಾರ್ಥ, ಮರಿಯಳು, ಲಾಜರ, ಯೇಸು ಮತ್ತು ಹನ್ನೆರಡು ಜನ ಶಿಷ್ಯರು ಬಹುಶಃ ಒಟ್ಟಿಗೆ ಊಟ ಮಾಡಿದರು. [4]KJVಯು ಪಠ್ಯದ ಅಕ್ಷರಶಃ ಅರ್ಥಕೊಡುತ್ತದೆ. [5]"ಸಿದ್ಧತೆಗಳು" ಅಡಿಗೆ ಮಾಡುವದನ್ನಷ್ಟೇ ಅಲ್ಲ, ಟೇಬಲನ್ನು ಸಿದ್ಧಪಡಿಸುವುದು, ಆಸನಗಳ ವ್ಯವಸ್ಥೆ ಮಾಡುವುದು (ಯೇಸುವಿನ ಪಕ್ಕದಲ್ಲಿ ಯಾರು ಕುಳಿತುಕೊಳ್ಳುವರು ಇತ್ಯಾದಿ) ಇರುತ್ತದೆ. [6]ಆ ದಿನಗಳಲ್ಲಿ ಮನೆಗಳಲ್ಲಿ ಒಳಗಿನ ಬಾಗಿಲುಗಳು ಹೆಚ್ಚಾಗಿ ಇರುತ್ತಿರಲಿಲ್ಲ. ಮಾರ್ಥಳು ಇದ್ದ ಹಾಗೂ ಯೇಸುವು ಇದ್ದ ಸ್ಥಳಗಳ ಮಧ್ಯದಲ್ಲಿ ಬಾಗಿಲು ಇದ್ದರೂ ಅದು ತೆರೆದಿಡಲ್ಪಟ್ಟಿರ ಬೇಕು. [7]ಇದನ್ನು ಪ್ರಸಂಗದಲ್ಲಿ ಉಪಯೋಗಿಸುವಾಗ ನಾನು ಸ್ವಲ್ಪ ತಮಾಷೆಯನ್ನು ಕೂಡಿಸುತ್ತೇನೆ: "ಇದು ನಮಗೇನೂ ಸಂಭವಿಸುವದಿಲ್ಲ. ಅಲ್ಲವೇ? ... ನಾನು ಪ್ರಸಂಗಿಸುವಾಗ ನೀವು ಪ್ರತಿಯೊಂದು

ಪದವನ್ನು ಹಿಡಿದುಕೊಳ್ಳುತ್ತೀರಿ. ನಿಮ್ಮ ಮನಸ್ಸು ಈ ಸಮಸ್ಯೆಗೆ ಇಲ್ಲವೇ ಆ ಸಮಸ್ಯೆಗೆ ... ಇಲ್ಲವೇ ಮಧ್ಯಾಹ್ನದ ಊಟಕ್ಕಾಗಿ ನಿಮಗೇನು ಇರುವುದು ಎಂದು ಚಂಚಲವಾಗುವದಿಲ್ಲ." [8]ಇದು ನನ್ನ ವೈಯಕ್ತಿಕ ಒತ್ತಡದ ಹೆಚ್ಚಾದ ಮೂಲವಾಗಿದೆ. [9]ಅನೇಕ ಮಹಿಳೆಯರು ಮಾರ್ಥ ಳೊಂದಿಗೆ ಗುರುತಿಸಿಕೊಳ್ಳುವರು. "ನೀವು ಪುರುಷರು ಅರ್ಥ ಮಾಡಿಕೊಳ್ಳುವದಿಲ್ಲ. ಮಾಡಲಿಕ್ಕೆ ನಮಗೆ ಮನಸಿರಲಿ ಬಿಡಲಿ ಕೆಲವು ಸಂಗತಿಗಳನ್ನು ಮಾಡಲೇ ಬೇಕಾಗುತ್ತದೆ" ಎಂದು ನನಗೆ ಹೇಳುತ್ತಾರೆ. [10]ಇದಲ್ಲೆವ್ರೂ ಒಂದೇ ಕೋಣೆಯಲ್ಲಿ ಸಂಭವಿಸುತ್ತಿದ್ದರೆ (ಅದಾಗುತ್ತಿದ್ದ ಬಲವಾದ ಸಾಧ್ಯತೆಯಿದೆ). ಮಾರ್ಥಳು ಎಂಥ ಗಲಭೆ ಎಬ್ಬಿಸುತ್ತಿರುವಳು?

[11]ಪ್ರಸಂಗದಲ್ಲಿ, "ನಿಮ್ಮ ಸಂಬಂಧಿಕರಲ್ಲ ಆದರೆ ಅವನ ಸಂಬಂಧಿಕರು" ಎಂದು ಇನ್ನೊಂದು ತಮಾಷೆಯನ್ನು ಕೂಡಿಸುತ್ತೇನೆ. [12]"Does Jesus Care?" ಎಂಬುದು ಈ ಪಾಠದ ಮೊದಲು ಇಲ್ಲವೇ ಅನಂತರ ಹಾಡಲು ಒಳ್ಳೆಯ ಸಂಗೀತ. [13]"ತುಂಡು ತುಂಡಾಗುವುದು" ಎಂಬುದು ಯು. ಎಸ್. ದಲ್ಲಿ ಸಾಮಾನ್ಯ ಹೇಳಿಕೆಯಾಗಿದ್ದು ಅತಿಯಾದ ಬೇಸರಿಕೆಯನ್ನು ಸೂಚಿಸುತ್ತದೆ. [14]ಅನೇಕ ಅನ್ವಯಗಳನ್ನು ಮಾಡಬಹುದು. ಕಾಲಕಾಲಕ್ಕೆ ಮಾರ್ಥಳಂತೆ ನಿಜ ವಾಗಿಯೂ ಮಹತ್ವವುಳ್ಳವುಗಳಾಗಿರದ ಸಂಗತಿಗಳ ಬಗ್ಗೆ ಅತಿಯಾಗಿ ಚಿಂತಿಸಿ ಮಹತ್ವವಾ ದವುಗಳನ್ನು ಅಲಕ್ಷ್ಯ ಮಾಡುತ್ತೇವೆ. ನಿಮಗೆ ಹಾಗೂ ನಿಮ್ಮ ಕೇಳುಗರಿಗೆ ಅತೀ ಮಹತ್ವವಾ ದವುಗಳ ಬಗ್ಗೆ ಅನ್ವಯ ಮಾಡಿರಿ. [15]ನಿಮ್ಮ ಆಮಂತ್ರಣದಲ್ಲಿ, "ಇದು ಬಾಪ್ತಿಸ್ಮ ಹೊಂದಲು ಉತ್ತಮವಾದ ದಿನ. ಇಲ್ಲವೇ ಪುನರುಜ್ಜೀವನ ಹೊಂದಲು ಒಳ್ಳೇ ದಿನ" ಎಂದು ಹೇಳಬಹುದು.

© 2009 Truth for Today